# ಪ್ರೇಕ್ಷಕರು ಆಗಲೇ ಬೈತಿದ್ದಾರೆ

ಅನುಷಾ ರಾವ್
ಕಲರ್ಸ್ ಕನ್ನಡದ 'ಕರಿಮಣಿ' ಅರುಂಧತಿ

◆ ನಟನೆಯ ಒಲವು ಮೂಡಿದ್ದು ಹೇಗೆ?

ಓದಿದ್ದು ಮನಶಾಸ್ತ್ರ. ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದೆ. ನನ್ನ ಪತಿ 'ಸಿಂಪಲ್ ಆಗಿ ಒಂದ್ ಲವ್ ಸ್ಟೋರಿ' ಸಿನಿಮಾ ಮಾಡುತ್ತಿದ್ದರು. ಅದರಲ್ಲಿ ಒಂದು ಪುಟ್ಟ ಪಾತ್ರವನ್ನು ನಿರ್ವಹಿಸುವ ಮೂಲಕ ಬಣ್ಣದ ನಂಟು ಬೆಳೆಯಿತು. ನಂತರ ನನ್ನ ಕೆಲಸವನ್ನು ಬಿಟ್ಟು ಡಾನ್ಸ್ ಆರಂಭಿಸಿದೆ. ಕ್ರಮೇಣ ಧಾರಾವಾಹಿಗಳಿಗೆ ಆಡಿಷನ್ ಕೊಡಲು ಶುರುಮಾಡಿದೆ. 'ದುರ್ಗಾ' ಮೂಲಕ ಕಿರುತೆರೆಗೆ ಬಂದೆ. ಈ ರೀತಿ ಅಭಿನಯ ಆರಂಭವಾಯಿತು.

◆ 'ಬ್ಲಾಕ್ ರೋಸ್' ಮುಖವಾಡ ಬಯಲಾದರೆ ಹೇಗೆ?

ಪಾತ್ರವೇ ಸಂಪೂರ್ಣ ಬದಲಾಗುವ ಹಂತ. ಇದುವರೆಗೆ ಮೃದು, ಕೋಮಲ ಗುಣದ ವ್ಯಕ್ತಿತ್ವದವಳಾಗಿದ್ದಳು. ಮತ್ತೊಂದು ರೂಪ ತಾಳುವ ಪ್ರಕ್ರಿಯೆ. ಆಕೆ ಏನೋ ಉದ್ದೇಶ ಇಟ್ಟುಕೊಂಡು ಹೀಗೆ ಮಾಡುತ್ತಿದ್ದಾಳೆ. ಅವಳ ಉದ್ದೇಶ ಏನು ಅಂತ ಈಗಲೇ ಹೇಳಲು ಆಗುವುದಿಲ್ಲ. ಬ್ಲಾಕ್ ರೋಸ್ ಸಂಪೂರ್ಣ ವಿರುದ್ಧ ಸ್ವಭಾವದವಳು. ಒಂದು ವರ್ಷ ಅರುಂಧತಿ ಪಾತ್ರವನ್ನು ನೋಡಿದವರಿಗೆ ಅದೆಲ್ಲ ಗೊತ್ತು. ಆಕೆಗೆ ಮಗನ ಮೇಲೆ ಇರುವ ಪ್ರೀತಿ, ಮಗ ತನ್ನ ತಾಯಿ ಮೇಲೆ ಇಟ್ಟಿರುವ ವಿಶ್ವಾಸ ತುಂಬ ದೊಡ್ಡದು. ಅವನಿಗೆ ಅಮ್ಮ ಹೇಳಿದ್ದೇ ಸರಿ, ಅಮ್ಮನಿಗಾಗಿ ಅವನು ಯಾವ ಸವಾಲನ್ನಾದರೂ ಎದುರಿಸಲು ಸಿದ್ಧನಾಗುತ್ತಾನೆ. ಹೆತ್ತ ತಾಯಿಗಿಂತಲೂ ಮಿಗಿಲಾಗಿ ಅವಳಲ್ಲಿ ನಂಬಿಕೆಯನ್ನು ಇಟ್ಟುಕೊಂಡಿದ್ದಾನೆ. ಆದರೆ, ಬ್ಲಾಕ್ ರೋಸ್ ನಾನೇ ಅನ್ನುವುದು ಇನ್ನೂ ಗೊತ್ತಾಗಿಲ್ಲ. ಬಹುಶಃ ಗೊತ್ತಾದರೆ ಅವನಿಗೆ ದೊಡ್ಡ ಆಘಾತ ಆಗುವುದು ನಿಶ್ಚಿತ. ಈಗ ಪಾತ್ರ ವಿಸ್ತಾರವಾಗುತ್ತಿದೆ. ಅರುಂಧತಿಗೆ ಕರ್ಣನ ಮೇಲೆ ದ್ವೇಷವೋ ಅವನ ತಾಯಿಯ ಮೇಲಿನ ದ್ವೇಷವೋ ಎನ್ನುವುದು ಈಗ ಗೊತ್ತಾಗುತ್ತದೆ. ಮುಂದೆ ನೋಡಬೇಕು. ಏಕೆಂದರೆ, ಅರುಂಧತಿ ಎಲ್ಲದನ್ನೂ ಪ್ಲಾನ್ ಮಾಡಿಯೇ ಮಾಡುತ್ತಿದ್ದಾಳೆ. ಅವಳಿಗೆ ಯಾರ ಮೇಲೆ ದ್ವೇಷ ಇದೆ ಎನ್ನುವುದು ಗೊತ್ತಿಲ್ಲ. ಹಿಂದೆ ಏನೋ ಆಗಿದೆ. ಅವಳಿಗೆ ಏನೋ ಆಗಬೇಕಿದೆ. ಅದನ್ನು ಸಾಧಿಸಲು ಹೀಗೆ ನಟಿಸುತ್ತಿದ್ದಾಳೆ.

◆ ಮುಂದಿನ ದಿನಗಳಲ್ಲಿ ವೀಕ್ಷಕರು ನಿಮ್ಮನ್ನು ಹೇಗೆ ನೋಡಬಹುದು?

ಈಗಾಗಲೇ ವೀಕ್ಷಕರಿಗೆ ಸಿಟ್ಟು ಬಂದಿದೆ. ಅವರು ಸುಮಾರು ಸಂದರ್ಭದಲ್ಲಿ ಪ್ರತಿಕ್ರಿಯೆಯನ್ನು ಕೊಡುತ್ತಿದ್ದಾರೆ. ಸಾಮಾಜಿಕ ಮಾಧ್ಯಮಗಳಲ್ಲಿ ಬೈಯುತ್ತಿರುವುದನ್ನು ನೋಡುತ್ತಿದ್ದೇನೆ. ತುಂಬ ಪ್ರೀತಿ ಮಾಡ್ತಾ ಇದ್ದರು. ಈಗ ಅವರೆಲ್ಲ ದ್ವೇಷ ಮಾಡುತ್ತಿದ್ದಾರೆ. ಹಿರಿಯರಿಗೆಲ್ಲ ನನ್ನ ಬಗ್ಗೆ ಕೋಪ ಬಂದಿದೆ. ನಾನು ಈ ರೀತಿ ಎನ್ನುವುದು ಗೊತ್ತಾಗಿದೆ. ಒಳ್ಳೆಯ ತಾಯಿ ಏಕೆ ಹೀಗಾದಳು ಎನ್ನುವ ಕುತೂಹಲ ಇದೆ. ಜೊತೆಗೆ ದ್ವೇಷವೂ ಅವರಲ್ಲಿ ಹುಟ್ಟಿದೆ. ಇನ್ನೂ ಕೆಟ್ಟಗುಣ ಅನಾವರಣ ಆಗಬೇಕಿದೆ. ಆಗ ವೀಕ್ಷಕರಲ್ಲಿ ಮತ್ತಷ್ಟು ಕೋಪ ಬರಬಹುದು. ನೆಗೆಟಿವ್ ಪಾತ್ರ ಮಾಡುವಾಗ ಇದು ಸಹಜ.

◆ ನಿಮಗೆ ಪ್ರೀತಿಯ ಪಾತ್ರ ಯಾವುದು?

ಯಾವುದೇ ಪಾತ್ರ ಸಿಕ್ಕರೂ ಅದಕ್ಕೆ ಜೀವ ತುಂಬಬೇಕಾಗಿರುತ್ತದೆ. ಯಾವುದೇ ಒಬ್ಬ ಕಲಾವಿದರಿಗೆ ಎದುರಾಗುವ ಸವಾಲು ಅದು. ಪಾಸಿಟಿವ್ ಪಾತ್ರ ಒಂದು ಸವಾಲಾದರೆ, ನೆಗೆಟಿವ್ ಪಾತ್ರ ಮತ್ತೊಂದು ರೀತಿಯ ಸವಾಲು. ಮತ್ತೊಬ್ಬರು ಮಾಡಿದಂತೆ ಮಾಡಬಾರದು. ಒಂದಿಷ್ಟು ಬದಲಾವಣೆ ಮಾಡಿಕೊಳ್ಳಬೇಕು ಎಂದು ಅನ್ನಿಸುತ್ತದೆ. ಸಾಮಾನ್ಯವಾಗಿ ಒಂದು ಪಾತ್ರಕ್ಕೆ ಬಣ್ಣ ಹಚ್ಚಿದ ಮೇಲೆ ಅಂತಹದ್ದೇ ಪಾತ್ರಗಳಲ್ಲಿ ಜನ ನೋಡಲು ಬಯಸುತ್ತಾರೆ. ಸಾಫ್ಟ್ ಪಾತ್ರಗಳನ್ನು ಮಾಡುತ್ತಿದ್ದ ನನಗೆ ನೆಗೆಟಿವ್ ಪಾತ್ರವೊಂದರಲ್ಲಿ ಕಾಣಿಸಿಕೊಳ್ಳಬೇಕು ಎನ್ನುವ ಆಸೆ ಇತ್ತು. ಆ ಸವಾಲು ಈಗ ಸಿಕ್ಕಿದೆ. ನನಗೆ ತುಂಬ ಖುಷಿ ಆಗಿದೆ. ಯಾವುದೇ ಪಾತ್ರವನ್ನು ಮಾಡಬಲ್ಲೆ ಅನ್ನಿಸಿದೆ.

◆ ವೀಕ್ಷಕರಲ್ಲಿ ಅವಾಸ್ತವ ಎನ್ನುವ ದೂರು ಇದೆ. ಇದರ ಬಗ್ಗೆ ಏನು ಹೇಳುತ್ತೀರಿ?

ಸೀರಿಯಲ್‌ನಲ್ಲಿ ಲಾಜಿಕ್ ನೋಡಬಾರದು. ಯಾರ ಮನೆಯಲ್ಲಿ ಹೆಣ್ಣುಮಕ್ಕಳು ಸದಾ ಅಲಂಕಾರ ಮಾಡಿಕೊಂಡು ಇರುತ್ತಾರೆ. ತರ್ಕ ನೋಡಿದಾಗ ಆ ಪಾತ್ರಕ್ಕೆ ಅರ್ಥವೇ ಬರಲ್ಲ. ಜನ ಬೈದುಕೊಂಡೇ ನೋಡುತ್ತಾರೆ. ಅವರಿಗೆ ಕಣ್ಣು ಕಾಣಲ್ವಾ? ಬುದ್ಧಿ ಇಲ್ವಾ ಎಂದು ಹೇಳುತ್ತಾರೆ ಬೈದುಕೊಂಡು ನೋಡುವುದು, ಕಾಮೆಂಟ್ ಮಾಡುವುದು ಸಹಜವಾಗಿದೆ. ವಾಸ್ತವ ನೆಲೆ ಎಂದು ಕಾಮನ್ ಕಥೆ ಹೇಳಲು ಆಗುವುದಿಲ್ಲ. ಇದು ಜೀವನಕ್ಕಿಂತ ಭಿನ್ನ, ಮನೋರಂಜನೆಯ ದೃಷ್ಟಿಯಿಂದ ನೋಡಬೇಕು. ನಾಯಕನೊಬ್ಬ ಮೊದಲ ಹೆಂಡತಿ ಇದ್ದೂ ಮತ್ತೊಂದು ಮದುವೆ ಆಗುತ್ತಾನೆ. ಅಂದರೆ ಅವನು ಅಷ್ಟು ದಡ್ಡನೇ. ತರ್ಕ ಮಾಡುತ್ತಾ ಹೋದರೆ ಉತ್ತರ ಸಿಗಲ್ಲ. ಇದು ಯಾರ ಮನೆಯಲ್ಲಿಯೂ ನಡೆಯಲ್ಲ ಎನ್ನುತ್ತಾರೆ. ಇಂತಹ ಆರೋಪದ ನಡುವೆ ಅವರು ಸೀರಿಯಲ್ ನೋಡುತ್ತಾರೆ ಅಂದರೆ ಇಬ್ಬರ ನಡುವೆ ಎಲ್ಲೋ ಸಂಧಿಸುತ್ತೇವೆ ಎನ್ನುವುದು ಮಾತ್ರ ಸತ್ಯ.



■ ರಾಘವೇಂದ್ರ ಕೆ.